ಶ್ರೀ ನದಾಶಿವಪ್ಪ ಪಾಟೀಲ್.—ಬಾವಿಯಲ್ಲಿ ನೀರೇ ಇಲ್ಲ. ಮೂರು ಮೈಲಿ ದೂರದಲ್ಲಿ ಕೃಷ್ಣಾ ನದಿ ಇದೆ. ಬಾವಿಯಿಂದ ನೀರು ಕೊಡುತ್ತೇವೆಂದು ಹೇಳುವುದು ನೋಡಿದರೆ ಆಶ್ಚರ್ಯವಾಗುತ್ತದೆ.

ಶ್ರೀ ಬಿ. ಎಂ. ಪಾಟೀಲ್.—ಯೋಜನೆಯನ್ನು ಕಾರ್ಯಗತ ಮಾಡುವಾಗ ನೀರು ಬಾವಿಗಳಲ್ಲಿ ಸಿಕ್ಕುತ್ತದೆಯೋ ಇಲ್ಲವೇ ಎನ್ನುವುದನ್ನು ನೋಡಿ ಕಾರ್ಯಗತ ಮಾಡಬೇಕಾಗುತ್ತದೆ.

Mr. SPEAKER.—Question time is over.

Sri M. H. JAYAPRAKASH NARAYAN.—I request that Question No. 484 may be taken up.

Mr. SPEAKER.—If this is not going to be a precedent, I shall extend the Question time by five minutes and permit Sri Jayaprakash Narayan to put Question No. 484.

Murder of V. P. Member

484. Sri M. H. JAYAPRAKASH NARAYAN (Sirsi).—

Will the Chief Minister be pleased to state :—

(*a*) whether Sri Halappa Harijan V. P. Member of Kyasinakere village, Honnali taluk, Shimoga District had filed a petiton dated 6th September 1968 to the Minister for Home to give him protection as he anticipated danger to his life ;

(*b*) if so, the action taken by Government to protect his life ;

(*c*) whether it has come to the notice of the Government that Sri Halappa, V. P. Member of Kyasinakere village has been murdered on 29th October 1968 at Kyasinakere ;

(*d*) whether they have received any report pertaining to the stage of investigation by the Police in the matter ;

(*e*) the reason for inordinate delay in investigation in such a serious matter ?

Sri VEERENDRA PATIL (Chief Minister). —

(*a*) Yes. The petition is addressed to the Prime Minister of India and to the Union Minister for Food and Agriculture by Sri Halappa and others.

(*b*) On receipt of the said petition the Superintendent of Police, the Deputy Superintendent of Police, Deputy Inspector General of Police, Central Range and the Deputy Superintendant of Police, C.I.D. visited Kyasanakere village, made enquiries and advised the parties to sink their differences and to live in peace. In fact both the parties gave an undertaking to do so on 16th September 1968. In addition, regular daily patrolling by the police was arranged and a party of 1 H.C. and 2 P.Cs was posted in the village to maintain law and order.

(SRI VEERENDRA PATIL)

(c) Sri Halappa is reported to have been murdered on 28th September 1968.

(d) A case in Cr. No. 95/68 u/s. 302 IPC of Nyamathi Police Station has been registered in this connection and the case is under investigation.

(e) There has been no inordinate delay in the investigation of the case. In fact 3 accused persons are reported to have been arrested.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಸ್ವಾಮಿ, ಬಹಳ ದುಃಖದಿಂದ ನಾನು 484ನೇ ಪ್ರಶ್ನೆಯನ್ನು ಕೇಳುತ್ತೇನೆ.

† ಶ್ರೀ ವೀರೇಂದ್ರ ಪಾಟೀಲ್.—(d) ಭಾಗಕ್ಕೆ ಉತ್ತರವಾಗಿ ಮೊಕದ್ದಮೆಯ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಹೇಳಿದೆ. ಈಚೆಗೆ ಬಂದಿರುವ ಮಾಹಿತಿಯ ಪ್ರಕಾರ ತನಿಖೆ ಪೂರ್ತಿಯಾಗಿ 13ನೇ ಫೆಬ್ರುವರಿ 1969ಕ್ಕೆ ಚಾರ್ಜ್ ಷೀಟ್ ಹಾಕಿದ್ದಾರೆ. ಕೇಸ್ ಸಬ್‌ಜುಡಿಸ್.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಕೊಲೆಯಾದ ದಿನದಿಂದ 13ನೇ ಫೆಬ್ರುವರಿ 1969ರ ವರೆಗೂ ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ತಡ ಮಾಡಿದ್ದಾರೆ. ಶಿವಮೊಗ್ಗ ಟೌನ್‌ಗೆ ಸೇರಿದ ಒಬ್ಬ ಅಧಿಕಾರಿಯನ್ನು ಅದೇ ಜನಾಂಗಕ್ಕೆ ಸೇರಿದ ಒಬ್ಬರನ್ನು ನೇಮಕ ಮಾಡಿದ್ದು ತಡವಾಗಲು ಕಾರಣವಲ್ಲವೇ, ಸ್ವಾಮಿ ?

ಶ್ರೀ ವೀರೇಂದ್ರ ಪಾಟೀಲ್.—ಕೇಸ್ ಕಾಂಪ್ಲಿಕೇಟೆಡ್ ಇದೆ ಎಂದು ತಿಳಿದುಕೊಂಡು ಬೆಂಗಳೂರಿನಿಂದ ಸ್ಪೆಷಲ್ ಸಿ ಐ. ಡಿ. ಒಬ್ಬರನ್ನು ಇನ್‌ವೆಸ್ಟಿಗೇಟ್ ಮಾಡಲು ಕಳಿಸಿ ಕೇಸ್ ಡಿಟೆಕ್ಟ್ ಆದ ಮೇಲೆ ಚಾರ್ಜ್‌ಷೀಟ್ ಹಾಕಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.—ಈಗ ಇಬ್ಬರು ಪೋಲೀಸ್ ಕಾನ್‌ಸ್ಟೇಬಲ್ಲುಗಳನ್ನು ಮತ್ತು ಒಬ್ಬ ಹೆಡ್ ಕಾನ್‌ಸ್ಟೇಬಲ್ಲನ್ನು ಅಲ್ಲಿ ಹಾಕಿದ್ದೀರಿ. 28ನೇ ಸೆಪ್ಟೆಂಬರ್ 1968 ರಲ್ಲಿ ಕೊಲೆಯಾಗಿದೆ. ಆ ದಿವಸ ನೀವು ನಾನು ಹೇಳಿದಂತೆ ಹಾಕಿರುವ 3 ಜನರು ಅಲ್ಲಿ ಕೆಲಸಮಾಡುತ್ತಿದ್ದರೇ ಇಲ್ಲವೇ ? 6ನೆಯ ತಾರೀಖು ರಕ್ಷಣೆ ಕೇಳಿದ್ದಾರೆ. ಅದಕ್ಕೆ ಪತ್ರ ಬರೆದಿದ್ದಾರೆ. ಕಾನ್‌ಸ್ಟೇಬಲ್ಲುಗಳು ಇಬ್ಬರು ಮತ್ತು ಹೆಡ್ ಕಾನ್‌ಸ್ಟೇಬಲ್ ಒಬ್ಬರು ಆ ದಿವಸ ಅಲ್ಲಿ ಕೆಲಸ ಮಾಡುತ್ತಿದ್ದರೆ ಕೊಲೆ ಹೇಗೆ ಆಯಿತು ?

ಶ್ರೀ ವೀರೇಂದ್ರ ಪಾಟೀಲ್.—ಉತ್ತರದಲ್ಲೇ ಹೇಳಿರುವ ಹಾಗೆ ಅಲ್ಲಿ ಎರಡು ಪಾರ್ಟಿ ಇವೆ. ಎಸ್ ಪಿ. ಡಿ. ಮೈ. ಎಸ್. ಪಿ. ಸರ್ಕಲ್ ಇನ್‌ಸ್ಪೆಕ್ಟರ್ ಅಲ್ಲಿಗೆ ಹೋಗಿ ಎನ್‌ಕ್ವೈರಿ ಮಾಡಿ ತಕ್ಕ ಕ್ರಮ ತೆಗೆದುಕೊಂಡಿದ್ದಾರೆ. ಸೆಂಟ್ರಲ್ ರೇಂಜ್ ಆಫೀಸರೂ ಅಲ್ಲಿಗೆ ಹೋಗಿದ್ದಾರೆ. ಇಷ್ಟೆಲ್ಲಾ ಮಾಡಿದ್ದರೂ ಯಾವಾಗ ಏನು ಬೇಕಾದರೂ ಆಗಬಹುದು. ಪೂರ್ಣ ವರದಿ ನನ್ನ ಬಳಿ ಇಲ್ಲದಿರುವುದರಿಂದ ಇನ್ನೇನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಈ ಗ್ರಾಮ ಪಂಚಾಯಿತಿ ಚುನಾವಣೆ ನಡೆದ ತಕ್ಷಣವೇ ದಿವಂಗತ ಹಾಲಪ್ಪನವರು 6 ನೇ ಸೆಪ್ಟೆಂಬರ್ 1968 ರಲ್ಲಿ ಅರ್ಜಿಕೊಟ್ಟರು. ಅದನ್ನು ಒಳಾಡಳಿತ ಸಚಿವರಿಗೆ ಪ್ರಧಾನಮಂತ್ರಿಗಳಿಗೆ ಕಳಿಸಿ ನನಗೂ ಒಂದು ಕಾಪಿ ಕೊಟ್ಟಿದ್ದರು. ನಾನೂ ಪೋಲೀಸಿಗೆ ಹೇಳಿದ್ದೆ. ಬಹಳ ಎಚ್ಚರಿಗೆ ವಹಿಸಬೇಕೆಂದು ಟೆಲಿಫೋನ್ ಸಹ ಮಾಡಿದ್ದೆ. ಇಷ್ಟೆಲ್ಲಾ ಆಗಿದ್ದರೂ ಕೂಡ ಕೊಲೆಯಾಗುವುದನ್ನು ತಪ್ಪಿಸುವುದಕ್ಕೆ ಸರಕಾರಕ್ಕೇಕೆ ಸಾಧ್ಯವಾಗಿಲ್ಲ ? ಪೋಲೀಸು ಒಂದೋಬಸ್ತು ಮತ್ತು ಉನ್ನುಪಾರಿ ಸರಿಯಾಗಿಟ್ಟು ತಪ್ಪಿಸಬಹುದಾಗಿತ್ತಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಅರ್ಜಿ ಬಂದಿಲ್ಲ ಎಂದು ಹೇಳಿಲ್ಲ ಅಲ್ಲಿ ಪಾರ್ಟಿ ಇದೆ ಎಂಬುದನ್ನು ಒಪ್ಪಿದ್ದೇವೆ. ಅಲ್ಲಿ ಗೊಂದಲವಾಗಬಹುದು, ಅಶಾಂತಿಯಾಗಬಹುದು ಎಂಬ ದೃಷ್ಟಿಯಿಂದ ಅಲ್ಲಿಗೆ ಇಬ್ಬರು ಕಾನ್‌ಸ್ಟೇಬಲ್ಲುಗಳನ್ನು ಮತ್ತು ಒಬ್ಬರು ಹೆಡ್ ಕಾನ್‌ಸ್ಟೇಬಲ್ಲನ್ನು ಹಾಕಿದೆವು. ಆದರೆ ಯಾವಾಗಲೂ ಎಲ್ಲವನ್ನೂ ಕಾದು ಕೂಡುವುದಕ್ಕಾಗುವುದಿಲ್ಲ. ಅಶಾಂತಿಯಾಗದಹಾಗೆ ನೋಡಿಕೊಳ್ಳಲು ಪ್ರಯತ್ನಮಾಡಿದ್ದೇವೆ. ಎರಡು ಪಾರ್ಟಿ ಇವೆ. ಮರ್ಡರ್ ಯಾವಾಗ ಹೇಗೆ ಆಗಿದೆ, ಏನಾಗಿದೆ ಎಂಬುದು ಸಬ್‌ಜುಡಿಸ್ ಇರುವುದರಿಂದ ನಾನು ಆ ವಿಚಾರದಲ್ಲೇನೂ ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಶ್ರೀ ಎಸ್. ಎಸ್. ಅರಕೇರಿ.—ಹಾಲಪ್ಪನವರು ರೆಪ್ರಸೆಂಟೇಷನ್ ಕಳಿಸಿದಮೇಲೆ ಆರು ಜನರಲ್ಲ ಯಾರನ್ನಾದರೂ ಅರೆಸ್ಟ್ ಮಾಡಿದ್ದೀರಾ ? ಮಾಡಿಲ್ಲದಿದ್ದರೆ ಕಾರಣವೇನು ? ಶಿವಮೊಗ್ಗ ಜಿಲ್ಲೆಯಲ್ಲಿ ಈ ಕೊಲೆ ಜನರಲ್ಲ ಬಹಳ ಭೀತಿಯನ್ನುಂಟುಮಾಡಿದೆ.

ಶ್ರೀ ವೀರೇಂದ್ರ ಪಾಟೀಲ್.—ಈಗಾಗಲೆ ವಿಚಾರ ಹೇಳಿದ್ದೇನೆ. ಯಾರನ್ನು ಅರೆಸ್ಟ್ ಮಾಡಿದ್ದಾರೆಂಬ ಪ್ರಶ್ನೆಯಿಲ್ಲ ಕೇಸು ಡಿಚೆಕ್ಟ್ ಆಗಿದೆ, 4 ಜನರಮೇಲೆ ಕೇಸಿದೆ, 3 ಜನರನ್ನು ಅರೆಸ್ಟ್ ಮಾಡಿದೆ. ಈ ವಿಚಾರ ಸಬ್‌ಜುಡಿಸ್ ಆಗಿರುವುದರಿಂದ ಇದಕ್ಕಿಂತ ಹೆಚ್ಚು ಹೇಳುವುದ ಕ್ಕಾಗುವುದಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—2 ಕಾನ್‌ಸ್ಟೆಬಲ್ಲುಗಳು ಮತ್ತು ಒಬ್ಬ ಹೆಡ್ ಕಾನ್‌ಸ್ಟೇಬಲ್ ಅಲ್ಲಿಗೆ ಹಾಕಿರುವವರು ಕೆಲಸಮಾಡುತ್ತಿದ್ದಾರೇ, ಇಲ್ಲವೇ ಎಂದು ವರದಿ ತರಿಸಿ ಈ ಸಭೆಗೆತಿಳಿಸಬೇಕು ಎಂದು ಮಂತ್ರಿಗಳಿಗೆ ಅಧ್ಯಕ್ಷರು ಹೇಳಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—28ನೇ ಸೆಪ್ಟೆಂಬರ್ 1968 ರಲ್ಲಿ ಎಲ್ಲರೂ ಕೆಲಸಮಾಡು ತ್ತಿದ್ದರು.

ಶ್ರೀ ಕೆ. ಎಚ್. ರಂಗನಾಥ್.—ಬರೆದು ತಕ್ಷಣ ವರದಿ ತರಿಸಿ ಉತ್ತರ ಕೊಡುವಾಗುವುದೇ ?

ಶ್ರೀ ವೀರೇಂದ್ರ ಪಾಟೀಲ್.—ಅದನ್ನು ಈ ಸಭೆಯಲ್ಲಿ ಹೇಳುವುದು ಸರಿಯಲ್ಲ.

Mr. SPEAKER.—Question Hour is over.

QUESTIONS FOR ANSWERS ON THE DAY

(but not taken up)

Kavals in Holalkere Taluk

2. **Sri B. PARAMESWARAPPA** (Holalkere).—

Will the Minister for Revenue be pleased to state :—

(*a*) the number of Kavals that were present and that are present in Holalkere Taluk (Kavalwise information may please be furnished) ;

(*b*) the extent of land released for cultivation in each Kaval each year ;

(*c*) out of the land so released the extent of land released to Scheduled Caste, Scheduled Tribes, political sufferers, Scheduled Caste and Scheduled Tribes hostels together with the survey numbers in which lands have been released (Kavalwise information may please be furnished) ;

(*d*) the survey numbers of the above Kavals where lands are still remaining and whether any representations have been received from the villages in this behalf (Kavalwise information may please be given) ;

(*e*) whether any lands have been released in 1967 ; and if so, the method that will be followed for distributing the said lands together with the names of persons to whom arrangements have been made for distributing the said lands ?